# ಭಾಷೆ, ಶಿಕ್ಷಣ ಮತ್ತು ಸಾಮಾಜಿಕ ಅಭಿವೃದ್ಧಿ– ಡೇವಿಡ್ ಹಾರ್ಸ್ಬರ್ಗ್‌ರನ್ನು ನೆನೆಯುತ್ತಾ

Language, Education and Social Development - Remembering David Horsburgh

– ವಿಜಯ್ ಪದಕಿ

## ಆರಂಭಿಕ ಚಿಂತನೆಗಳು

ಕರ್ನಾಟಕದಲ್ಲಿ "ಭಾಷಾ ನೀತಿ" ಯ ವಿಷಯವು ಮತ್ತೊಮ್ಮೆ ಸುದ್ದಿಯಲ್ಲಿ ಇರುವಾಗಲೇ 'ಲರ್ನಿಂಗ್ ಕರ್ವ್' ಗಾಗಿ ಲೇಖನ ಬರೆಯಬೇಕೆಂಬ ಆಹ್ವಾನ ಬಂದಿತು. ಒಂದು ವಿಷಯವು ಪ್ರಾಸಂಗಿಕತೆಯ ಮೌಲ್ಯವನ್ನು ಉಳಿಸಿಕೊಳ್ಳಬೇಕಾದರೆ, ಅದು ಮತ್ತೆ ಮತ್ತೆ ಮರುಕಳಿಸುತ್ತಿರಬೇಕು, ಅದು ತನ್ನ ಉಪಸ್ಥಿತಿಯನ್ನು ಹಲವು ದಿಕ್ಕುಗಳಲ್ಲಿ ಆಕ್ರಮಣಕಾರಿಯಾಗಿ ಅನುಭವವೇದ್ಯವಾಗಿಸುತ್ತಿರಬೇಕು, ಆ ಸುದ್ದಿ ಸಾಕು ಸಾಕೆನಿಸುವಂತಾಗಿ ಮುಂದೆ ಮತ್ತೆ ಕಾಣಿಸಿಕೊಳ್ಳುವವರೆಗೆ ಅದರ ಜಾಗಕ್ಕೆ ಮರಳಬೇಕು. ಇತರ ಪ್ರಾಸಂಗಿಕತೆಗಳಿಗೂ ಅವುಗಳ ಆವರ್ತಕ ತಿರುವುಗಳನ್ನು ನೀಡುತ್ತಿರಬೇಕು– ಬುದ್ಧಿವಂತಿಕೆಯು ಪ್ರಾಕೃತಿಕವೋ ಅಥವಾ ಪೋಷಣೆಯ ಫಲಿತವೋ? ಬೀದಿ ನಾಯಿಗಳನ್ನು ನಿರ್ಮೂಲನೆ ಮಾಡಬೇಕೋ ಅಥವಾ ಅವುಗಳಿಗೆ ಪುನರ್ವಸತಿ ಕಲ್ಪಿಸಬೇಕೋ? ಸಾರ್ವಜನಿಕ ಸಂಸ್ಥೆಗಳಲ್ಲಿ ಮೀಸಲಾತಿಯೋ ಅಥವಾ ಅರ್ಹತೆ ಸಾಕೋ? ಹೀಗೆ. ಮಕ್ಕಳ ಆಟಗಳು ಮತ್ತು ಕಾಲಕ್ಷೇಪಗಳು ಆವರ್ತಕಗಳಲ್ಲಿ ಕಾಣಿಸಿಕೊಂಡ ಉದಾಹರಣೆಗಳು ಇತ್ತೀಚಿನವರೆಗೂ ಇವೆ. ಅವುಗಳಲ್ಲಿ ಪ್ರಮುಖವಾದವುಗಳಾದ ಲಗೋರಿ, ಕಬಡ್ಡಿ, ಗಾಳಿಪಟಗಳು ಮತ್ತು ಗಿಲ್ಲಿ ದಂಡಗಳು ಸಕಾಲಿಕತೆಯ ನಿಯಮಗಳನ್ನು ಅನುಸರಿಸಿವೆ. ನಮ್ಮ ಒಡನಾಟಗಳ ಭಾಗವಾಗಿರುವ ಆವರ್ತಕ ಸ್ವಭಾವದ ಬಗ್ಗೆ ಆಶ್ಚರ್ಯಪಡದೇ ಬೇರೆ ದಾರಿ ಇಲ್ಲ. ಅದರ ಆವಿಷ್ಕಾರಕ್ಕಾಗಿ ಕಾಯುತ್ತಿರುವ ವೈಜ್ಞಾನಿಕ ವಿವರಣೆ ಎಲ್ಲೋ ಇರಬೇಕು.

ಭಾಷಾ ನೀತಿ ಮತ್ತೊಮ್ಮೆ ಸುದ್ಧಿಯಲ್ಲಿದೆ. ಯಾವುದೇ ನೀತಿ ಚರ್ಚೆಯಲ್ಲಿ, ಚರ್ಚೆಯು ನಾವು ಸ್ವತಃ ಅಳವಡಿಸಿಕೊಳ್ಳುವ (ಮುಂದಿನ ಪೀಳಿಗೆಯ ಮೇಲೆ ಪರಿಣಾಮ ಬೀರುವ) ನಿಯಮಗಳು, ಆಯ್ಕೆಯ ಮೂಲಭೂತ ಅವಶ್ಯಕತೆಗಳನ್ನು ಪೂರೈಸುವಂತೆ, ಒಂದು ಘನವಾದ, ವಿಶ್ವಾಸಾರ್ಹವಾದ ಸಂಗತಿಗಳ ಮೇಲೆ ಅವಲಂಬಿತವಾಗಿದೆ ಎಂದು ನಾವು ಭಾವಿಸುತ್ತೇವೆ. ಈ ರೀತಿಯಾಗಿ ಯಾವುದೇ ನಿಯಮಾವಳಿಗಳು ವಾಸ್ತವವಾಗಿ ಎಲ್ಲ ಪರಿಸ್ಥಿತಿಗಳಲ್ಲಿಯೂ ಎಲ್ಲರನ್ನೂ ತೃಪ್ತಿಪಡಿಸುವಂತೆ ಪರಿಪೂರ್ಣವಾಗಿರುವುದಿಲ್ಲ ಎಂಬುದನ್ನು ನಾವು ಒಪ್ಪಿಕೊಳ್ಳುತ್ತೇವೆ. ನೀತಿ ಚರ್ಚೆಯು ಭಾವನಾತ್ಮಕವಾಗಿರುತ್ತದೆ ಮತ್ತು ಭಾವನಾತ್ಮಕತೆಯು ಅನೇಕ ವಿಧಗಳಲ್ಲಿ ತಾರ್ಕಿಕತೆ ವಿಶ್ಲೇಷಣೆಗೆ ಹಾನಿ ಮಾಡುತ್ತದೆ. ತಳಪಾಯವು ಅಗಲ ಮತ್ತು ಆಳ ಎರಡನ್ನೂ ಹೊಂದಿದೆ ಎಂದು ಖಚಿತಪಡಿಸಿಕೊಳ್ಳಲು ಇವು ಹೆಚ್ಚುವರಿ ಕಾರಣವಷ್ಟೇ.

ಈ ಹಂತದಲ್ಲಿ ಹಕ್ಕು ನಿರಾಕರಣೆ ಮಂಡಿಸಬೇಕಾಗುತ್ತದೆ. ಈಗಾಗಲೇ ಅತಿಯಾಗಿ ಕಾವೇರಿರುವ ಸ್ಥಿತಿಯಲ್ಲಿ ಇನ್ನಷ್ಟು ಬೆಂಕಿ ಹೊತ್ತಿಸುವುದು ಅಥವಾ ಚರ್ಚೆಯಲ್ಲಿ ಒಂದು ಅಥವಾ ಇನ್ನೊಂದು ಪಕ್ಷದ ಪರವನ್ನು ವಹಿಸಿಕೊಳ್ಳುವುದು ಈ ಪ್ರಬಂಧದ ಉದ್ದೇಶವಲ್ಲ. ಬದಲಾಗಿ, ಚರ್ಚೆಗೆ ವೈಜ್ಞಾನಿಕ ಮತ್ತು ನೈತಿಕ ಎರಡೂ

ಆಯಾಮಗಳು ಇವೆ ಎಂದು ನಮಗೆ ನಾವೇ ನೆನಪಿಸಿಕೊಳ್ಳುವುದು. ಇದಲ್ಲದೆ, ಭಾಷೆಯಂತಹ ನಿರ್ಣಾಯಕ ಸಮಸ್ಯೆಯಲ್ಲಿ ನಾವು ಈ ಎರಡನ್ನೂ ಸುಲಭವಾಗಿ ಬೇರ್ಪಡಿಸಲು ಸಾಧ್ಯವಿಲ್ಲ.

ಭಾಷೆ ಮತ್ತು ಅಭಿವೃದ್ಧಿ

ನಾವೀಗ ಭಾಷೆಯ ಮೇಲೆ ಗಮನವನ್ನು ಕೇಂದ್ರೀಕರಿಸಿದ್ದೇವೆ. ಅದನ್ನು ಸದ್ಯಕ್ಕೆ ಬದಿಗಿಟ್ಟು ಕೆಲವು ಪ್ರಾಥಮಿಕ ಪ್ರಶ್ನೆಗಳನ್ನು ಕೇಳಿಕೊಳ್ಳಬೇಕು. ಸಮಾಜದಲ್ಲಿ ಯಾವುದೇ ಅಭಿವೃದ್ಧಿ ಪ್ರಯತ್ನದ ಉದ್ದೇಶವೇನು? ಏಕೆಂದರೆ ಶಿಕ್ಷಣದ ವಿಷಯದಲ್ಲಿ ಸಮಾಜದ ಕಾಳಜಿಯು ಕೆಲವು ನಿರ್ಣಾಯಕ ಸಾಮಾಜಿಕ ಉದ್ದೇಶಗಳಿಗಾಗಿ ಎಂದು ಸ್ಪಷ್ಟವಾಗಿ ತಿಳಿದಿರುವುದರಿಂದ ಇದು ಅಗತ್ಯವಾದ ಮೊದಲ ಹೆಜ್ಜೆಯಾಗಿ ಕಂಡುಬರುತ್ತದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಶಿಕ್ಷಣದಲ್ಲಿನ ಭಾಷಾ ನೀತಿಯು ಆ ಉದ್ದೇಶಗಳಿಗೆ ಅನುಗುಣವಾಗಿರುತ್ತದೆ ಎಂದು ಭಾವಿಸಬಹುದು.

ಒಂದು ವಾಸ್ತವಿಕ ಪ್ರಕರಣದ ಮೂಲಕ ಇದಕ್ಕೆ ಉತ್ತರವನ್ನು ಹುಡುಕೋಣ. ಒಂದು ಸುಸ್ಥಾಪಿತ ಮತ್ತು ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯು ಗ್ರಾಮೀಣ ಶಾಲೆಯನ್ನು ಪ್ರಾರಂಭಿಸುತ್ತದೆ. ನಿವೇಶನ, ಕಟ್ಟಡ, ಹಾರ್ಡ್ ವೇರ್, ಸಾಫ್ಟ್ ವೇರ್ ಗಳಿಗಾಗಿ ಹಣವನ್ನು ಕ್ರೋಢೀಕರಿಸಲಾಗುತ್ತದೆ. ಹಳ್ಳಿಯ ಮಕ್ಕಳು ದೊಡ್ಡವರಾದ ಮೇಲೆ ಅವರಿಗೆ ಉದ್ಯೋಗಾವಕಾಶ ಸಿಗುವಂತೆ ವೃತ್ತಿ ಕೌಶಲ್ಯಕ್ಕೆ ಒತ್ತು ನೀಡುವ ಪಠ್ಯಕ್ರಮವನ್ನು ರೂಪಿಸಲಾಗುತ್ತದೆ.

ಪ್ರಶ್ನೆಗಳು: ಅದೇಕೆ ನಮ್ಮ ಮಕ್ಕಳು ವಿಜ್ಞಾನಿಗಳು, ಇಂಜಿನಿಯರ್‌ಗಳು ಮತ್ತು ವ್ಯಾಪಾರ ಕಾರ್ಯನಿರ್ವಾಹಕರಾಗಲು ಮತ್ತು ಅವರ ಮಕ್ಕಳು ಪ್ಲಂಬರ್‌ಗಳು, ಬಡಗಿಗಳು ಮತ್ತು ಟ್ರಾಕ್ಟರ್ ಮೆಕ್ಯಾನಿಕ್‌ಗಳಾಗುವ ಅವಕಾಶಗಳನ್ನು ಹೊಂದಿರಬೇಕು? ಶಾಲಾ ಶಿಕ್ಷಣ ವ್ಯವಸ್ಥೆಯಲ್ಲಿನ ವ್ಯತ್ಯಾಸದಿಂದ ಅವಕಾಶವು ಅಸಮಾನವಾಗಿ ಹಂಚಿಕೆಯಾಗುವುದಿಲ್ಲವೇ? ಗ್ರಾಮೀಣ ಶಾಲೆಯು ಇವೆರಡರ ನಡುವಿನ ವ್ಯತ್ಯಾಸಗಳನ್ನು ಸಾಂಸ್ಥಿಕಗೊಳಿಸುತ್ತಿಲ್ಲವೇ? ಈ ವ್ಯತ್ಯಾಸಕ್ಕೆ ನಾವು ಸಮರ್ಥನೆಯನ್ನು ಕಂಡುಕೊಂಡರೆ (ನಾವು ಯಾವಾಗಲೂ ಮಾಡುವಂತೆ), "ಅವರು ವಿಭಿನ್ನರಾಗಿದವರು ಹಾಗಾಗಿ ಅವರ ಪಾಲಿನದ್ದೂ ವಿಭಿನ್ನವಾದುದು" ಎಂಬ ಆಧರಿತ ಊಹೆಯನ್ನು ನಾವು ಬಹಿರಂಗಪಡಿಸುತ್ತಿಲ್ಲವೇ?

ಅದರ ಪರೋಪಕಾರಿ ಭಾವನೆಯ ಹೊರತಾಗಿಯೂ, ಗ್ರಾಮೀಣ ಶಾಲೆಯು "ಅಭಿವೃದ್ಧಿ" ಗಾಗಿ ನೀಡಿರುವ ಕೊಡುಗೆಯು ಬಹಳ ಕಡಿಮೆ ಎಂಬುದು ಸ್ಪಷ್ಟವಾಗಿರಬೇಕು. ವಾಸ್ತವವಾಗಿ, ಅದರ ವ್ಯವಸ್ಥೆಯ-ಕೈಗೊಂಬೆಯಾಗಿರುವ ಕಾರಣದಿಂದ ಅನೇಕರು ಅದನ್ನು "ಅಭಿವೃದ್ಧಿ-ವಿರೋಧಿ" ಎಂದು ಲೇಬಲ್ ಮಾಡುತ್ತಾರೆ.

ಆರ್ಥಿಕ ಅಭಿವೃದ್ಧಿಗಷ್ಟೇ ಅಲ್ಲ, ಯಾವುದೇ ಅಭಿವೃದ್ಧಿ ಪ್ರಕ್ರಿಯೆಗೆ, ಸಬಲೀಕರಣವು ಪ್ರಮುಖ ಮಾನದಂಡವಾಗಿದೆ. ಉದಾಹರಣೆಗೆ, ಮಕ್ಕಳ ಪಾಲನೆಯಲ್ಲಿ ನಾವು ಹೀಗೆ ಹೇಳುತ್ತೇವೆ- "ನನಗೆ ತಿಳಿದಿರುವುದೆಲ್ಲವೂ ಇಷ್ಟೇ, ಅದೆಲ್ಲವನ್ನೂ ನಿನಗೆ ತಿಳಿಸಿರುವೆ. ಇದರ ಆಧಾರದ ಮೇಲೆ ನೀನು ನಿನ್ನ ಬದುಕನ್ನು ಕಟ್ಟಿಕೊಂಡು ನನಗಿಂತಲೂ ಉತ್ತಮನಾಗಬಹುದು" . ಸಬಲೀಕರಣ ಸಾಧ್ಯವಾಗಬೇಕಾದರೆ ಈ ಬಗೆಯ ದೃಷ್ಟಿಕೋನ ಮತ್ತು ಇನ್ನೂ ಹಲವು ವಿಚಾರಗಳ ಜ್ಞಾನ ಅತ್ಯಗತ್ಯ. ಹೀಗಲ್ಲದೇ ನಾವು ಯಾವುದೋ ಒಂದು ಅಂಶವನ್ನು ಅಥವಾ ಆಯ್ದ ಒಂದುದೃಷ್ಟಿಕೋನದ ಕೇವಲ ಒಂದು ಭಾಗವನ್ನಷ್ಟೇ ಅಳವಡಿಸಿಕೊಂಡರೆ, ಅದು ಅಭಿವೃದ್ಧಿ ಎನಿಸಿಕೊಳ್ಳುವುದಿಲ್ಲ. ಅದು ತಾರತಮ್ಯವನ್ನು ಸೃಷ್ಟಿಸುವತ್ತ ವಾಲುತ್ತದೆ. ಗ್ರಾಮೀಣ ಶಾಲೆಯನ್ನು ತನ್ನ ಮನೆಗೆಲಸದವಳ ಮಗಳಿಗೆ

“ಲಾಭದಾಯಕ ಉದ್ಯೋಗ” ವನ್ನು ಒದಗಿಸುವ ಗೃಹಿಣಿಗೆ ಹೋಲಿಸಬಹುದು. ಆ ಹುಡುಗಿಯು ಜೀವನದಲ್ಲಿನ ಸುಧಾರಿತ ಭವಿಷ್ಯಕ್ಕೆಂದು ತನ್ನ ಅಧ್ಯಯನವನ್ನು ಮುಂದುವರಿಸಲು ನಿರ್ಧರಿಸಿದಾಗ ಗೃಹಿಣಿಯು ಒಂದು ರೀತಿಯ ವಿಶ್ವಾಸಘಾತುಕತನವನ್ನು ಅನುಭವಿಸುತ್ತಾಳೆ.

ಶಿಕ್ಷಣದ ಮೂಲಕ ಆಗುವ ಅಭಿವೃದ್ಧಿಯ ಕುರಿತು ಹೇಳುವುದಾದರೆ, ಅಭಿವೃದ್ಧಿ ಪ್ರಕ್ರಿಯೆಗೆ ಮಾಹಿತಿಯು ಮಾತ್ರ ಮುಖ್ಯವಾಗುತ್ತದೆ ಎಂದು ನಾವು ಯೋಚಿಸುತ್ತೇವೆ, ಆದರೆ ಸಂಯೋಜಿತ ಪರಿಪೂರ್ಣತೆಯನ್ನು ಪರಿಪೂರ್ಣವಾಗಿ ವರ್ಗಾಯಿಸಿದಾಗ ಮಾತ್ರ ನಿಜವಾದ ಸಬಲೀಕರಣವು ಸಾಧ್ಯವಾಗಬಹುದು– ಮಾಹಿತಿ ಮತ್ತು ಮಾಹಿತಿಯ ವಾಹಕವನ್ನು ಅಂದರೆ, ಒಬ್ಬರು ಮತ್ತಷ್ಟು ವೇಗವಾಗಿ ಅಭಿವೃದ್ಧಿ ಹೊಂದಲು ಅನುವು ಮಾಡಿಕೊಡುವ ವಾಹಕವನ್ನು ಸಂಪೂರ್ಣವಾಗಿ ವರ್ಗಾಯಿಸಿದರೆ ಮಾತ್ರ ನಿಜವಾದ ಸಬಲೀಕರಣವು ಸಾಧ್ಯವಾಗಬಹುದು. ನಾವು ಒಂದನ್ನು ನೀಡಿ, ಇನ್ನೊಂದನ್ನು ತಡೆಹಿಡಿದುಕೊಂಡರೆ ಅದನ್ನು ಭಾಗಶಃ ಮತ್ತು ಆಯ್ದ ಅಭಿವೃದ್ಧಿ ಎಂದು ಮಾತ್ರ ಕರೆಯಬಹುದು ಮತ್ತು ಅದು ದಬ್ಬಾಳಿಕೆಯ ಕ್ರಮ ಎನಿಸಿಕೊಳ್ಳುತ್ತದೆ. ಜನರ ಜೀವನಮಟ್ಟದಲ್ಲಿ ಕಣ್ಣಿಗೆ ಎದ್ದುಕಾಣಿಸುವಂತಹ ವ್ಯತ್ಯಾಸಗಳಿದ್ದು, ಈ ವ್ಯತ್ಯಾಸಕ್ಕೆ ಕಾರಣವಾಗುವ ಜ್ಞಾನಪ್ರಾಪ್ತಿ ಮತ್ತು ಆ ಮೂಲಕ ಅಧಿಕಾರಪ್ರಾಪ್ತಿ ಸಾಧ್ಯವಾಗುವ ಸಾಮಾಜಿಕ ಸನ್ನಿವೇಶದಲ್ಲಿ ಇಂಗ್ಲಿಷ್ ಭಾಷಾ ಮಾಧ್ಯಮದ ಮೇಲೆ ಏಕಪಕ್ಷೀಯ ನಿಯಂತ್ರಣವನ್ನು ಮುಂದುವರೆಸಿದರೆ ಸಬಲೀಕರಣದ ಅಭಿವೃದ್ಧಿಯ ಉದ್ದೇಶವನ್ನು ಎಂದಿಗಾದರೂ ಪೂರೈಸಬಹುದೇ?

ಇದು ಆಂಗ್ಲ ಮಾಧ್ಯಮ ಶಾಲೆಗಳನ್ನು ಮುಕ್ತವಾಗಿ ಅನುಮತಿಸುವ ರಾಜ್ಯಗಳ ಪರವಾದ ದಾರಿತಪ್ಪಿಸುವಂತಹ ವಾದವಲ್ಲ. ನಮ್ಮ ಅಭಿವೃದ್ಧಿ ಪ್ರಯತ್ನದಲ್ಲಿ ಅದು ಸ್ವತಃ ಅನುಮಾನಾಸ್ಪದ ಮೌಲ್ಯವಾಗಿದೆ. ಯಾವುದೇ “ನೀತಿ ” ಸೂತ್ರ ಎದುರಿಸುವ ನಿಜವಾದ ಪ್ರಶ್ನೆಯೆಂದರೆ: ಈ ನೀತಿಸೂತ್ರ ಸಬಲೀಕರಣದ ದಿಕ್ಕಿನಲ್ಲಿಯೇ ಇದೆಯೇ ಅಥವಾ ಯಥಾಸ್ಥಿತಿಯನ್ನು ಮುನ್ನಡೆಸುವ ದಿಕ್ಕಿನಲ್ಲಿದೆಯೇ? ಒಂದು ವೇಳೆ ಇಂಗ್ಲಿಷ್ ಭಾಷೆಯನ್ನು ಸಂಪೂರ್ಣವಾಗಿ ತೆಗೆದುಹಾಕಿದರೆ ಅದು ಅಪ್ರಾಯೋಗಿಕತೆಯ, ಬಹುಶಃ ಅವಿವೇಕದ ಮತ್ತು ಯಾವುದೇ ದೇಶೀಯ ಭಾಷಾ ನೀತಿಯಲ್ಲಿ ನಿಜವಾಗಿಯೂ ಉದ್ದೇಶಿಸಿಲ್ಲದ ನಡೆಯಾಗಿದೆ ಎಂದು ಸಾಮಾನ್ಯವಾಗಿ ಒಪ್ಪಿಕೊಂಡರೆ, ಸಾಮಾಜಿಕ ವ್ಯವಸ್ಥೆಯಲ್ಲಿ ಭಾಷೆಯನ್ನು ಉಳಿಸಿಕೊಳ್ಳುವುದು ಕೇವಲ ವಿಶೇಷ ಅಲ್ಪಸಂಖ್ಯಾತರಿಗೆ ಉಪಯೋಗವಾಗಲೆಂದು ಮಾತ್ರವೇ? ಎಂಬ ಪ್ರಶ್ನೆ ಉದ್ಭವಿಸುತ್ತದೆ.

ಹೀಗಾಗಿ ಚರ್ಚೆಯು, ಅನಿವಾರ್ಯವಾಗಿ, ಇಂಗ್ಲಿಷ್ ಪರ ಮತ್ತು ಇಂಗ್ಲಿಷ್ ವಿರುದ್ಧದ ನಿಲುವುಗಳಿಗೆ ಧ್ರುವೀಕರಣಗೊಳ್ಳುತ್ತದೆ. ಶಾಲೆಗಳು, ಕಾಲೇಜುಗಳು ಮತ್ತು ವೃತ್ತಿಪರ ಶಿಕ್ಷಣದಲ್ಲಿ ಮತ್ತು ನಮ್ಮ ಎಲ್ಲಾ ಸಾಮಾಜಿಕ ಮತ್ತು ಆರ್ಥಿಕ ವಹಿವಾಟುಗಳಲ್ಲಿನ ನಿಜವಾದ ಬಳಕೆಯಲ್ಲಿ ಇಂಗ್ಲಿಷ್ ಭಾಷೆಯ ಪರವಾಗಿ ಪರಿಚಿತ ವಾದಗಳಿವೆ. ಆ ವಾದಗಳನ್ನೆಲ್ಲ ಇಲ್ಲಿ ಪುನರಾವರ್ತಿಸುವ ಅಗತ್ಯವಿಲ್ಲ. ಅದೇ ರೀತಿ ಪರಿಚಿತವಾದ ಪ್ರಬಲವಾದ ದೇಶೀಯ ನೀತಿಯ ಪರವಾದ ವಾದಗಳೂ ಇವೆ. ರಾಜ್ಯಗಳಿಗೆ ವಸಾಹತುಶಾಹಿ ಗತಕಾಲದ ಹಾನಿಗಳನ್ನು ಇಲ್ಲವಾಗಿಸುವ ಶ್ರದ್ಧೆ ಇದೆಯಾದರೂ ಅದರ ವಿರಾಮದ ಗತಿಯ ವಿಷಯದಲ್ಲಿ ನಿಸ್ಸಂಶಯವಾಗಿ ತೀವ್ರ ಆಕ್ರೋಶ, ಅಸಹನೆಗಳೂ ಇವೆ.

ಭಾಷೆಯ ಕುರಿತು ಮರುಚಿಂತನೆ

ಮೇಲಿನದನ್ನು ಅನುಸರಿಸಿ, ಶೈಕ್ಷಣಿಕ ನಿರ್ಧಾರಗಳನ್ನು ತೆಗೆದುಕೊಳ್ಳುವ ಮತ್ತು ಶಿಕ್ಷಣದ ಪರವಾಗಿ ನಿಲ್ಲುವ ನಾವೆಲ್ಲರೂ, ನಮ್ಮ ಸೂಚಿತ ಘೋಷಣೆಗಳು ಯಾವ ಆಧಾರವಾಕ್ಯಗಳನ್ನು ಆಧರಿಸಿದೆ ಎಂಬುದನ್ನು ನಿರಂತರವಾಗಿ ಪ್ರಶ್ನಿಸಿಕೊಳ್ಳಬೇಕಾದುದು ಅತ್ಯಂತ ಮಹತ್ವದ್ದಾಗಿದೆ. ಆಯ್ಕೆ ಮಾಡಿದ ಸ್ಥಳೀಯ ಭಾಷೆಯೊಂದಿಗೆ ಜೊತೆಯಾಗುವ ಯಾವುದೇ ಇತರ ಭಾಷೆಯ ಬಗ್ಗೆ ಎದ್ದು ಕಾಣುವ ಎರಡು ಸಾಮಾನ್ಯ ಆತಂಕದ ಸಂಗತಿಗಳೆಂದರೆ: (ಎ) ಒಂದರ ಪ್ರಗತಿಗಾಗಿ ಇನ್ನೊಂದನ್ನು ಬಲಿಕೊಡಲಾಗುತ್ತದೆ, ಮತ್ತು (ಬಿ) ಕಲಿಯುವವರು ಒಂದೇ ಸಮಯದಲ್ಲಿ ಎರಡು ಅಥವಾ ಹೆಚ್ಚಿನ ಭಾಷೆಯನ್ನು ನಿಭಾಯಿಸಲು ಸಾಧ್ಯವಿಲ್ಲ.

ವಿಪರ್ಯಾಸವೆಂದರೆ ನಮ್ಮ ಕರ್ನಾಟಕ ರಾಜ್ಯದ ನೀಲ್ ಬಾಗ್‌ನಲ್ಲೇ ಈ ಎರಡೂ ಆತಂಕಗಳಿಗೆ ಆಧಾರವಾಗಿರುವ ತಪ್ಪು ಗ್ರಹೀತಗಳು ಬಯಲುಗೊಂಡ ನಿದರ್ಶನವನ್ನು ನಾವು ಕಾಣಬಹುದಾಗಿದೆ. ಕೋಲಾರ ಜಿಲ್ಲೆಯ ಗ್ರಾಮೀಣ ಶಾಲೆಯೊಂದರಲ್ಲಿ ಮಕ್ಕಳ ಮಾನಸಿಕ ಆರೋಗ್ಯದ ಮೇಲೆ ಯಾವುದೇ ದುಷ್ಪರಿಣಾಮವಾಗದಂತೆ ಕನ್ನಡ, ಇಂಗ್ಲಿಷ್, ಹಿಂದಿ ಮತ್ತು ಸ್ಥಳೀಯ ಮಾತೃಭಾಷೆಯಾದ ತೆಲುಗು ಭಾಷೆಗಳನ್ನು ಏಕಕಾಲದಲ್ಲಿ ಮತ್ತು ಅದೇ ಹುರುಪಿನಿಂದ ಕಲಿಸಲಾಗುತ್ತಿದೆ! ಕಲಿಕೆಯ ಹಿನ್ನೆಲೆಯಲ್ಲಿ ನೋಡುವುದಾದರೆ ಆ ನಾಲ್ಕು ಭಾಷೆಗಳಿಂದ ರೂಪುಗೊಂಡ ಅರಿವಿನ ಸಮೂಹವನ್ನು ಅತ್ಯಂತ ಸಕಾರಾತ್ಮಕ ಅಂಶವೆಂದು ಪರಿಗಣಿಸಬಹುದಾಗಿದೆ. ಎರಡು ಅಥವಾ ಹೆಚ್ಚಿನ ಭಾಷೆಗಳನ್ನು ಕಲಿಯುವ “ಹೊರೆ” ಯಿಂದ “ಹಾನಿ” ಸಂಭವಿಸುತ್ತದೆ ಎಂದು ಹೇಳುವುದು ಕೇವಲ ವಯಸ್ಕರ ಸಮಸ್ಯೆಯಾಗಿದೆ. ಮಗುವಿನ ಸ್ವಾಭಾವಿಕ ಭಾಷೆಯ ಹಸಿವನ್ನು ಪೂರೈಸದಿರುವುದೇ ನಿಜವಾದ ಹಾನಿಯಾಗಿದೆ.

ನೀಲ್ ಬಾಗ್‌ನಲ್ಲಿ ಇಂಗ್ಲಿಷ್ ಭಾಷೆಯ ಕಲಿಕೆಯನ್ನು ಸ್ಥಳೀಯ ಭಾಷೆ, ಸಾಹಿತ್ಯ, ಸ್ಥಳೀಯ ಪದ್ಧತಿಗಳ ಮತ್ತು ಸಂಪ್ರದಾಯಗಳ, ಒಟ್ಟಾರೆ ಸ್ಥಳೀಯ ಸಂಸ್ಕೃತಿಯ ಮರುಶೋಧನೆ ಮತ್ತು ಉತ್ತೇಜನದೊಂದಿಗೆ ಹೋಲಿಸಬಹುದು. ಬೇರೆಡೆ ಇರುವ ಶಿಕ್ಷಣತಜ್ಞರು ಈಗ ನೀಲ್ ಬಾಗ್ ಅನುಭವವನ್ನು ನಿಜವಾದ ಭಾರತೀಯ ಪರ್ಯಾಯವೆಂದು ಗುರುತಿಸುತ್ತಿದ್ದಾರೆ.

ಸಂಜ್ಞಾನಾತ್ಮಕ ಮನಶ್ಶಾಸ್ತ್ರದ ಪ್ರಕಾರ

- ಮಕ್ಕಳು ಯಾವುದೇ ದುಷ್ಪರಿಣಾಮಗಳಿಲ್ಲದೇ, ಎಂಟು ಭಾಷೆಗಳನ್ನು ಸುಲಭವಾಗಿ ಕಲಿಯಬಲ್ಲರು.
- ಹೆಚ್ಚು ಭಾಷೆಗಳನ್ನು ಕಲಿತಷ್ಟೂ ಅಮೂರ್ತ ಬುದ್ಧಿವಂತಿಕೆಯ ಬೆಳವಣಿಗೆಯು ಹೆಚ್ಚುತ್ತದೆ.

ನಾವು ಕೇಳಿಕೊಳ್ಳಬೇಕಾದ ಇನ್ನೂ ಮೂಲಭೂತವಾದ ಪ್ರಶ್ನೆಯೆಂದರೆ: ಭಾಷೆ ಎಂದರೇನು? ಸಾಮಾನ್ಯವಾಗಿ ನಾವು ಭಾಷೆಯನ್ನು ಕೇವಲ ಮಾನವ ಜಾತಿಗೆ ವಿಶಿಷ್ಟವೆನಿಸುವ ಸಾಮರ್ಥ್ಯಗಳಾದ ಮಾತನಾಡುವಿಕೆ, ಓದುವಿಕೆ ಮತ್ತು ಬರವಣಿಗೆಯ ಮೂಲಕ ಮಾಡುವ ಸಾಂಕೇತಿಕ ಮೌಖಿಕ ಸಂವಹನ ಎಂದು ಭಾವಿಸುತ್ತೇವೆ. ಈ ಸಾಂಕೇತಿಕ ಮೌಖಿಕ ಸಂವಹನವು ನಿಯೋ ಕಾರ್ಟೆಕ್ಸ್ (ಮೆದುಳಿನ ಒಂದು ಭಾಗ) ಅಸಾಧಾರಣ ಮಾಹಿತಿ ಸಂಸ್ಕರಣಾ ಸಾಮರ್ಥ್ಯದ ಜೊತೆ ಸೇರಿ ತಲೆಮಾರುಗಳಾದ್ಯಂತ ಮನುಷ್ಯ ಜೀವಿ ಜ್ಞಾನವನ್ನು ಸಂಚಯಿಸುತ್ತಿದೆ. ಆದರೆ ಇದು ಭಾಷೆಯನ್ನು ನೋಡುವ ಏಕೈಕ ದೃಷ್ಟಿಕೋನವೇ?

ಸುಮಾರು ಐವತ್ತು ಸಾವಿರ ವರ್ಷಗಳಿಂದಲೂ, ಮನುಷ್ಯಜೀವಿಯು ಸಮುದಾಯಗಳಲ್ಲಿ ವಾಸಿಸಲು ಪ್ರಾರಂಭಿಸಿದಂದಿನಿಂದಲೂ, ಬೆಳೆಯುತ್ತ ಬಂದಿರುವ ಭಾಷೆಯ ಇನ್ನೊಂದು ರೂಪವಿದೆ, ಸಂಕೀರ್ಣ

ಅನುಭವಗಳನ್ನು ಕಲಾತ್ಮಕ ಅಭಿವ್ಯಕ್ತಿಯಾಗಿ ದಾಖಲಿಸುವ ಮತ್ತು ರವಾನಿಸುವ ಮೌಖಿಕವಲ್ಲದ ವಿಧಾನವೊಂದಿದೆ. ಸಾವಿರಾರು ಜನರನ್ನು ಒಂದೇ ರೀತಿಯಲ್ಲಿ ಸೆಳೆಯಬಲ್ಲ ಅದ್ಭುತವಾದ ಸಂಗೀತಕ್ಕೂ ಸಹ ಆಡು ಭಾಷೆಯಲ್ಲಿ ಕವಿತೆಯನ್ನು ಬರೆಯಲು ಬೇಕಾದಷ್ಟೇ ಅಮೂರ್ತ ಬುದ್ಧಿವಂತಿಕೆಯ ಅವಶ್ಯಕತೆ ಇದೆ. ವಾಸ್ತವವಾಗಿ, ಎಲ್ಲಾ ಕಲೆಗಳೂ ತಮ್ಮದೇ ಆದ ರೀತಿಯಲ್ಲಿ ಭಾಷೆಗಳೇ ಆಗಿವೆ. ಕಾಲಾನಂತರದಲ್ಲಿ, ಈ ಭಾಷೆಯ ಸಂವಹನ ಮತ್ತು ಅದರ ನಿರಂತರ ಬೆಳವಣಿಗೆಯು ತನ್ನ ವಿಶಿಷ್ಟ ಶಬ್ದಕೋಶ ಮತ್ತು ವ್ಯಾಕರಣದೊಂದಿಗೆ ತನ್ನದೇ ಆದ ರೀತಿಯ ನಿಯಮಾವಳಿಗಳನ್ನು ಬಯಸುತ್ತದೆ.

ನಾವು ಗಣಿತವನ್ನು ಹೇಗೆ ನೋಡುತ್ತೇವೆ? ತೊಂಬತ್ತರ ದಶಕದ ಆರಂಭದಲ್ಲಿ ಸಾಫ್ಟ್‌ವೇರ್ ಅಭಿವೃದ್ಧಿಯು ಉತ್ಕರ್ಷದ ಆರಂಭದಲ್ಲಿದ್ದಾಗ, ಅನೇಕ ಯುವ ಭಾರತೀಯ ಸಾಫ್ಟ್‌ವೇರ್ ಎಂಜಿನಿಯರ್‌ಗಳು ಪಶ್ಚಿಮದಲ್ಲಿ, ಹೆಚ್ಚಾಗಿ ಯುಎಸ್‌ಎನಲ್ಲಿ ತಂತ್ರಜ್ಞಾನ ಅಭಿವೃದ್ಧಿ ಪಾಲುದಾರರೊಂದಿಗೆ ವ್ಯವಹರಿಸುವಾಗ ಸೂಕ್ಷ್ಮವಾಗಿ, ತಮಗರಿವಿಲ್ಲದೆಯೇ ಕೀಳರಿಮೆಯನ್ನು ಹೊಂದಿದ್ದರು. ಇದು ಇಂಗ್ಲಿಷ್ ಭಾಷೆಯಲ್ಲಿ ತಮಗೆ ಕೊರತೆ ಇದೆ ಎಂಬ ಅವರ ಸ್ವ-ಅರಿವಿನಿಂದ, ವಿಶೇಷವಾಗಿ, ಜಾಗತೀಕರಣದ ವ್ಯಾಪಾರ ಸಂದರ್ಭದ ಹೊಸತರಲ್ಲಿ, ಹುಟ್ಟಿಕೊಂಡಿತ್ತು. ಕ್ರಮೇಣ ಅವರು ಗಣಿತ ಮಾತ್ರ ಮುಖ್ಯವಾದ ಭಾಷೆ ಎಂದು ಮತ್ತು ಅದರಲ್ಲಿ ತಾವು ಅತ್ಯುತ್ತಮರಾಗಿದ್ದೇವೆ ಎಂದು ಬಹುಬೇಗನೆ ಅರಿತುಕೊಂಡರು. ಹತ್ತು ವರ್ಷಗಳ ನಂತರ ಯುವ ವೃತ್ತಿಪರರು ತಮ್ಮನ್ನು ತಾವು ಪ್ರಸ್ತುತಪಡಿಸಿಕೊಳ್ಳುವ ರೀತಿಯಲ್ಲಿ ಎಷ್ಟು ವ್ಯತ್ಯಾಸವಿದೆ!

ಬುದ್ಧಿವಂತಿಕೆಯ ಕುರಿತು ಮರುಚಿಂತಿಸುತ್ತಾ

ಇದು ತಪ್ಪಾಗಿ ಅರ್ಥೈಸಲ್ಪಟ್ಟಿರುವ (ಮತ್ತು ಸಾಮಾನ್ಯವಾಗಿ ದೋಷಪೂರಿತಗೊಂಡಿರುವ) ಪದವಾದ ಬುದ್ಧಿವಂತಿಕೆಯ ವಿಷಯದತ್ತ ಗಮನ ಹರಿಸೋಣ. ಬುದ್ಧಿವಂತಿಕೆಯ ವೈಜ್ಞಾನಿಕ ಪರಿಕಲ್ಪನೆಯ ಅಥವಾ ಐಕ್ಯೂನ ಆರಂಭಿಕ ಪ್ರತಿಪಾದನೆ ಸುಮಾರು ನೂರು ವರ್ಷಳಿಂದ ಬೆಳೆದು ಬಂದಿದೆ.

ಯಾವುದೇ ಮನುಷ್ಯ ಪ್ರಯತ್ನದಲ್ಲಿ ಅಮೂರ್ತ ಬುದ್ಧಿವಂತಿಕೆಯ ಮೌಲ್ಯವನ್ನು ಕಡೆಗಣಿಸಲಾಗದು. ವಾಸ್ತವವಾಗಿ, ಒಬ್ಬ ವ್ಯಕ್ತಿಯಲ್ಲಿ ಅಮೂರ್ತ ಬುದ್ಧಿವಂತಿಕೆಯ ಮಟ್ಟವು ಹೆಚ್ಚಾದಂತೆ, ವ್ಯಕ್ತಿಯ ವಿಭಿನ್ನವಾದ ಮನುಷ್ಯ ಪ್ರಯತ್ನದ ಉತ್ಪನ್ನಗಳೆಲ್ಲದರಲ್ಲೂ ಪರಿಕಲ್ಪನಾ ಅಂತಃಸಂಬಂಧಗಳ ಗ್ರಹಿಕೆ ಹೆಚ್ಚು ಸುಲಭದಲ್ಲಿ ಸಂಭವಿಸುತ್ತದೆ. ಕಲಿಕೆಯ ಪ್ರಕ್ರಿಯೆಯ ಎರಡು ಮೂಲಭೂತ (ಮತ್ತು ಪೂರಕ) ಅಧಿಕೃತ ಘಟಕಗಳಾದ ಸಾಮಾನ್ಯೀಕರಣ ಮತ್ತು ತಾರತಮ್ಯಗಳು ವ್ಯಕ್ತಿಯು ವಿವಿಧ ರೀತಿಯ ಬೌದ್ಧಿಕ ಪ್ರಚೋದನೆಗೆ ಒಡ್ಡಿಕೊಂಡರೆ ಅದು ಇನ್ನಷ್ಟು ಮೊನಚುಗೊಳ್ಳುತ್ತದೆ.

ಈ ರೀತಿಯಲ್ಲಿ ನೋಡಿದಾಗ ಬುದ್ಧಿವಂತಿಕೆಯನ್ನು ಸರಳವಾಗಿ ಕಲಿಯುವ ಸಾಮರ್ಥ್ಯ ಎಂದು ವ್ಯಾಖ್ಯಾನಿಸಬಹುದು.

ಈ ವ್ಯಾಖ್ಯಾನವು ಸಾಕಷ್ಟು ವೈಜ್ಞಾನಿಕ-ತಾಂತ್ರಿಕ ಅವಶ್ಯಕತೆಗಳನ್ನು ಪೂರೈಸಬೇಕಾಗುತ್ತದೆ. ಕಲಿಕೆಯ ಪ್ರಕ್ರಿಯೆಯನ್ನು ಸಾಮಾನ್ಯವಾಗಿ ಎಲ್ಲಾ ಮಾನವ ಗುಣಲಕ್ಷಣಗಳಲ್ಲಿ ಅತ್ಯಂತ ಮೂಲಭೂತ ಅಂಶವೆಂದು ಪರಿಗಣಿಸಲಾಗುತ್ತದೆ.

ಕಲಿಯುವ ಸಾಮರ್ಥ್ಯವು ಜೀವವಿಕಾಸದ ಪ್ರಕ್ರಿಯೆಯಲ್ಲಿನ ಎಲ್ಲಾ ಇತರ ಜೀವಜಾತಿಗಳಿಂದ ಮಾನವ ಜೀವಜಾತಿಯನ್ನು ಪ್ರತ್ಯೇಕಿಸುತ್ತದೆ. ಮಾನವ ಜೀವಜಾತಿಗಳಲ್ಲಿ ನಿಯೋ-ಕಾರ್ಟೆಕ್ಸ್ ವಿಕಾಸಗೊಂಡ ಮೇಲೆಅದರೊಂದಿಗೆ ಇಂದ್ರಿಯ ದತ್ತಾಂಶ ಸಂಗ್ರಹಣೆ ಮತ್ತು ಮಾಹಿತಿ ಸಂಸ್ಕರಣೆಯ ಅಗಾಧವಾದ ಸಾಮರ್ಥ್ಯವೂ ಬಂದಿತು. ಇದು ಇತರ ಜೀವಜಾತಿಗಳಲ್ಲಿ ಕಂಡುಬರುವ ರೇಖೀಯವಾದ, ಕ್ರಮ ಕ್ರಮವಾದ ಪ್ರಗತಿಗಿಂತಲೂ ಭಿನ್ನವಾದ ಕ್ವಾಂಟಮ್ ಜಿಗಿತವಾಗಿದೆ ಎನ್ನಬಹುದು (ಎಪ್ಪತ್ತು ವರ್ಷಗಳ ಪೂರ್ಣ ಜೀವನವನ್ನು ನಡೆಸುವ ಸಾಮಾನ್ಯ ವಯಸ್ಕರು ಲಭ್ಯವಿರುವ ಸಾಮರ್ಥ್ಯದ ಸುಮಾರು ಹತ್ತು ಪ್ರತಿಶತವನ್ನು ಬಳಸುತ್ತಾರೆ ಎಂದು ಅಂದಾಜಿಸಲಾಗಿದೆ). ಈ ಮಾಹಿತಿ ಸಂಸ್ಕರಣಾ ಸಾಮರ್ಥ್ಯದ ಅತ್ಯಂತ ಗಮನಾರ್ಹ ಪರಿಣಾಮವೆಂದರೆ ಜೀವಜಾತಿಗಳಲ್ಲಿನ ವಿವಿಧ ನಡವಳಿಕೆಗಳ ನಿರ್ಧರಿಸುವಿಕೆಯಾಗಿದೆ. ಇತರ ಎಲ್ಲಾ ಜೀವಜಾತಿಗಳಲ್ಲಿಯೂ, ತಳೀಯವಾಗಿ ಪ್ರೋಗ್ರಾಮ್ ಮಾಡಲಾದ ನಡವಳಿಕೆಗಳು ಕಲಿತ ನಡವಳಿಕೆಗಳನ್ನು ಮೀರಿಸುತ್ತವೆ. ಮಾನವರಲ್ಲಿ, ಈ ಅನುಪಾತವು ವ್ಯತಿರಿಕ್ತವಾಗಿದೆ. ಇದು ಪ್ರತಿಯೊಬ್ಬ ನಾಯಿ ಪ್ರೇಮಿಗೂ ತಿಳಿದಿರುತ್ತದೆ. ನಾಯಿಗೆ ಕಲಿಸಲಾಗುವ ಅತ್ಯಂತ ಅಸಾಧಾರಣವಾದ “ಬುದ್ಧಿವಂತ” ತಂತ್ರಗಳನ್ನು ಅದರ ಮರಿಗೆ ರವಾನಿಸಲು ಆಗುವುದಿಲ್ಲ. ಮಾನವ ತರಬೇತುದಾರನು ನಾಯಿಮರಿಯನ್ನು ಹೊಸದಾಗಿ ಪಳಗಿಸಲು ಪ್ರಾರಂಭಿಸಬೇಕು. ಮತ್ತು ಪ್ರತಿ ಶಿಕ್ಷಕರಿಗೆ ತಿಳಿದಿರುವಂತೆ (ಆದರೆ ಅಗತ್ಯವಾಗಿ ಒಪ್ಪಿಕೊಳ್ಳುವುದಿಲ್ಲ), ಒಂದನೇ ತರಗತಿಯ ಮಕ್ಕಳು ಆ ವಯಸ್ಸಿನಲ್ಲಿ ಬಹುತೇಕ ವಿಷಯಗಳಲ್ಲಿ ತಮಗೆ ತಿಳಿದಿರಬೇಕಾದಕ್ಕಿಂತ ಹೆಚ್ಚಿನದನ್ನು ತಿಳಿದಿರುತ್ತಾರೆ.

ಅರವತ್ತರ ದಶಕದಷ್ಟು ಹಿಂದೆಯೇ ಮಾನವ ಬುದ್ಧಿವಂತಿಕೆಯನ್ನು ಗ್ರಹಿಸುವಲ್ಲಿನ ಮಹತ್ವದ ತಿರುವು ಸಂಭವಿಸಿತ್ತು. ಆ ಕಾಲಕ್ಕೇ ಬುದ್ಧಿವಂತಿಕೆಯ ರಚನೆಯನ್ನು ಅಪವರ್ತನೀಯ ವಿಶ್ಲೇಷಣೆಗೆ ಒಳಪಡಿಸಲಾಗಿತ್ತು. ಇದನ್ನು ಬಹು ಬುದ್ಧಿವಂತಿಕೆಯ (ಮಲ್ಟಿಪಲ್ ಇಂಟೆಲಿಜೆನ್ಸ್) ಪರಿಕಲ್ಪನೆಯಾಗಿ ಅಭಿವೃದ್ಧಿಪಡಿಸಲು ಇನ್ನೂ ಇಪ್ಪತ್ತು ವರ್ಷ ಹಿಡಿಯಿತು. ವಿಷಯದ ಶೈಕ್ಷಣಿಕ ವಿವರಗಳಿಗೆ ಹೋಗದೆ, ಬುದ್ಧಿವಂತಿಕೆಯ ವಿಷಯದ ಬಗ್ಗೆ ಸಂಶೋಧನೆ ಮಾಡಿದ ಅಷ್ಟೂ ಸಾಕ್ಷ್ಯಗಳಿಂದ ಶಿಕ್ಷಣಕ್ಕೆ ಸಂಬಂಧಿಸಿದಂತೆ ನಾಲ್ಕು ಪ್ರಮುಖ ಪಾಠಗಳನ್ನು ನಾವು ಗಮನಿಸಬೇಕಾಗಿದೆ:

· ಮಾನವ ಪ್ರಯತ್ನಗಳಲ್ಲಿ ನೆರವೇರಿಕೆ, ಅಭಿವೃದ್ಧಿ ಮತ್ತು ಉದ್ದೇಶಪೂರ್ವಕತೆಗಳಿಗೆ ಬಹು ಬುದ್ಧಿವಂತಿಕೆ (ಮಲ್ಟಿ ಇಂಟೆಲಿಜೆನ್ಸ್) ಗಳಾಗಿ ಅವಲೋಕಿಸಬಹುದಾದ ವ್ಯಾಪಕವಾದ ಸಾಮರ್ಥ್ಯದ ಅಗತ್ಯವಿರುತ್ತದೆ.

· ಅಮೂರ್ತ ಬುದ್ಧಿವಂತಿಕೆಯ ಮಟ್ಟವು ಹೆಚ್ಚಾದಷ್ಟೂ ಬುದ್ಧಿವಂತಿಕೆಯ ವಿವಿಧ ಅಂಶಗಳ ನಡುವಿನ ಸಂಬಂಧವೂ ಹೆಚ್ಚಾಗುತ್ತದೆ.

· ಗ್ರಹಿಕೆ ಮತ್ತು ಪ್ರಚೋದನೆಗಳು ಹೆಚ್ಚಾದಷ್ಟೂ ಅಮೂರ್ತ ಬುದ್ಧಿವಂತಿಕೆಯ ಬೆಳವಣಿಗೆ ಹೆಚ್ಚುತ್ತದೆ.

· ಬಹು ಬುದ್ಧಿವಂತಿಕೆಗಳನ್ನು ಅಭಿವೃದ್ಧಿಪಡಿಸಬಹುದಾಗಿದೆ.

ರಂಗಭೂಮಿ ಅಧ್ಯಯನಗಳು ಮತ್ತು ಕಲಿಕೆಯ ಪ್ರಕ್ರಿಯೆ

ನಾವು ಶಾಲೆಯಲ್ಲಿ ಭೌತಶಾಸ್ತ್ರವನ್ನು ಏಕೆ ಕಲಿಸುತ್ತೇವೆ? ಇತಿಹಾಸವನ್ನು ಏಕೆ ಕಲಿಸಬೇಕು? ಇವೆಲ್ಲ ಬಹಳ ಪ್ರಾಥಮಿಕ ಪ್ರಶ್ನೆಗಳೆಂದು ತೋರಬಹುದು. ಆದರೆ ಅದಕ್ಕಿಂತ ಹೆಚ್ಚು ಮುಖ್ಯವಾದ ಅಂಶವೆಂದರೆ ಎಲ್ಲಾ ವಿದ್ಯಾರ್ಥಿಗಳು ಭೌತವಿಜ್ಞಾನಿಗಳಾಗಬೇಕೆಂದು ನಾವು ನಿರೀಕ್ಷಿಸುವುದಿಲ್ಲ. ನಾವು ಭೌತಶಾಸ್ತ್ರವನ್ನು ಏಕೆ ಕಲಿಸುತ್ತೇವೆ ಎಂದರೆ ಭೌತಶಾಸ್ತ್ರದ ಕಲಿಕೆ ತನ್ನಲ್ಲಿ ತಾನು ಸೂಕ್ತವಾದುದಾಗಿದೆ ಮತ್ತು ಅದು ಯಾವುದಾದರೂ

ರೀತಿಯಲ್ಲಿ ಬದುಕಿನ ಮತ್ತು ಜೀವನದ ವ್ಯವಹಾರದಲ್ಲಿ ಉಪಯುಕ್ತವಾಗುತ್ತದೆ. ಈ ತರ್ಕವು ಅನೇಕ ಇತರ ವಿಷಯಗಳಿಗೆ ಸಹಜವಾಗಿ ಅನ್ವಯಿಸುತ್ತದೆ. ಅವುಗಳ ಕಲಿಕೆ ತನ್ನಲ್ಲಿ ತಾನು ಸೂಕ್ತವಾದುದು. ಆದ್ದರಿಂದಲೇ ಅವು ಪಠ್ಯಕ್ರಮದಲ್ಲಿ ಸ್ಥಾನ ಗಳಿಸಿವೆ.

ಇನ್ನು ರಂಗಭೂಮಿ ಅಧ್ಯಯನ ಮತ್ತು ಪ್ರದರ್ಶನ ಕಲೆಗಳನ್ನು ಏಕೆ ಕಲಿಸಬೇಕು? ಒಟ್ಟಾರೆ ಎಲ್ಲಾ ಬಗೆಯ ಕಲೆಗಳನ್ನು ಏಕೆ ಕಲಿಸಬೇಕು?

ಶಾಲಾ ಪಠ್ಯಕ್ರಮದಲ್ಲಿನ ರಂಗಭೂಮಿ ಅಧ್ಯಯನಗಳು ಈ ಕೆಳಗಿನ ವಿಷಯಗಳಿಗೆ ಬಹಳ ಮುಖ್ಯವಾದುದೆಂದು ಜಗತ್ತಿನೆಲ್ಲೆಡೆ ಭಾವಿಸಲಾಗಿದೆ:

- ಜೀವನ ಕೌಶಲ್ಯ ಅಭಿವೃದ್ಧಿಗೆ
- ಬಹು ಬುದ್ಧಿವಂತಿಕೆಗಳನ್ನು ಬೆಳೆಸಲು
- ಸಾಮಾನ್ಯ ಬಲ ಮೆದುಳಿನ ಬೆಳವಣಿಗೆಗೆ

ಇದಕ್ಕೆ ಇಷ್ಟು ಮಾತ್ರ ವಿವರಣೆ ನೀಡಬಹುದು; ಇತರೆ ವಿಷಯಗಳ ಕಲಿಕೆಯು ಎಡ-ಮೆದುಳನ್ನು ಆಧರಿಸಿದ್ದರೆ ರಂಗಭೂಮಿ ಅಧ್ಯಯನವು ಪ್ರಾಯೋಗಿಕ ವಿಧಾನವನ್ನು ಆಧರಿಸಿದೆ. ಸಂಶೋಧನಾ ಪುರಾವೆಯು ಮಕ್ಕಳು, ಶಿಕ್ಷಕರು, ತರಗತಿಗಳು, ಕುಟುಂಬಗಳು ಮತ್ತು ಸಮುದಾಯದ ಮೇಲೆ ಬೀರುವ ಪ್ರಭಾವವನ್ನು ಪರೀಕ್ಷಿಸುವ ರೇಖಾಂಶದ ಅಧ್ಯಯನಗಳನ್ನು ಒಳಗೊಂಡಿದೆ.

ನಾವು ಸಾಮಾಜಿಕ ಅಭಿವೃದ್ಧಿಯ ಕಲ್ಪನೆ ಇದ್ದಾಗ ಮಾತ್ರ ನಾಟಕ ಅಧ್ಯಯನಗಳಿಗೆ (ಮತ್ತು ಎಲ್ಲಾ ಕಲೆಗಳ ಅಧ್ಯಯನಕ್ಕೆ) ನ್ಯಾಯಸಮ್ಮತವಾದ ಸ್ಥಾನವನ್ನು ಸಲ್ಲಿಸಬಹುದು. ಸಾಂಸ್ಕೃತಿಕ ಅಭಿವೃದ್ಧಿಯನ್ನು ಬಲಿ ಕೊಟ್ಟು ನಾಗಾಲೋಟದ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಬೇಕಾಗಿಲ್ಲ. ಆದರೆ ಸದ್ಯಕ್ಕೆ ಇದು ಭಾರತವನ್ನೂ ಒಳಗೊಂಡಂತೆ ಇತರ ವಸಾಹತೋತ್ತರ "ಅಭಿವೃದ್ಧಿ ಹೊಂದುತ್ತಿರುವ" ದೇಶಗಳ ದುಃಖದ ಸ್ಥಿತಿಯಾಗಿದೆ.

ಭಾಗಗಳ ವಿರುದ್ಧ ಸಂಪೂರ್ಣ

ಅಂತಿಮವಾಗಿ, ಸಾಮಾಜಿಕ ಅಗತ್ಯಗಳನ್ನು ಗುರುತಿಸುವ ಜವಾಬ್ದಾರಿ ಮತ್ತು ಅವುಗಳನ್ನು ಪೂರೈಸುವ ಜವಾಬ್ದಾರಿಯ ನಡುವಿನ ವಿಭಜನಾ ರೇಖೆಯನ್ನು ನಾವು ನಿರಂತರವಾಗಿ ಹುಡುಕಬೇಕಾಗಿದೆ. ಸಾಮಾಜಿಕ ಅಗತ್ಯವನ್ನು ಪೂರೈಸುವ ಜವಾಬ್ದಾರಿಗೆ ಹಾಲಿ ರಾಜಕೀಯ ವ್ಯವಸ್ಥೆಯನ್ನು ಪರಿಗಣಿಸಬಹುದಾದರೂ ಸಾಮಾಜಿಕ ಅಗತ್ಯಗಳನ್ನು ಗುರುತಿಸುವ ಜವಾಬ್ದಾರಿ ತೃಪ್ತಿಕರವಾಗಿ ನಿಭಾಯಿಸಲಾಗಿದೆಯೇ ಎಂಬ ಪ್ರಶ್ನೆಯನ್ನು ನಾವು ಹೆಚ್ಚು ಹುರುಪಿನಿಂದ, ಮತ್ತು ಸಮತೋಲನದಿಂದ ಪರಿಶೀಲಿಸಬೇಕಾಗಿದೆ. ಇನ್ನು ಭಾಷೆಯ ಪ್ರಶ್ನೆಯನ್ನು ಭಾಷಾ ಪ್ರವೀಣರಿಗೆ ಬಹಳ ಮೂಲಭೂತ ಮತ್ತು ಗಂಭೀರವಾದ ವಿಷಯವಾಗಿ ಕಾಣುತ್ತದೆ.

ಯಾವುದೇ ಜಾಗದ ರಾಜಕೀಯ ನಾಯಕತ್ವವು ಎಲ್ಲೋ ಅಪರೂಪಕ್ಕೆ ಇತಿಹಾಸದ ಪ್ರಜ್ಞೆಯನ್ನು ಹೊಂದಿರುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ, ಅಲ್ಪಾವಧಿಯ ಲಾಭಗಳ ಲೆಕ್ಕಾಚಾರವು ನಾಯಕರು ನಿರ್ಗಮಿಸಿದ ನಂತರ ಗಂಭೀರ ಪರಿಣಾಮಗಳನ್ನು ಉಂಟುಮಾಡುತ್ತದೆ, ಸಮಾಜದಲ್ಲಿ ಅಳಿಸಲಾಗದ ಗಾಯಗಳು ಮತ್ತು ಗುರುತುಗಳನ್ನು ಬಿಟ್ಟು

ಹೋಗುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ರಾಜಕಾರಣಿ–ನಾಯಕನು ಕ್ಷಣಿಕ, ಅವಕಾಶವಾದಿ, ಭಾವನೆ–ಆಧಾರಿತ ಕಲ್ಪನೆಯ ಮೇಲೆ ಕಾರ್ಯನಿರ್ವಹಿಸುತ್ತಾ, ಅದನ್ನು ಸಂಬಂಧಪಟ್ಟ ಜನರ ಮೇಲೆ ಹೇರುತ್ತಾ, ನಂತರ ಸಂಭವಿಸುವ ದುಷ್ಪರಿಣಾಮಗಳಿಗೆ ಯಾರಿಗೂ ಉತ್ತರದಾಯಿಯಾಗದೇ ನಿರ್ಗಮಿಸುವುದನ್ನು ನಿರೀಕ್ಷಿಸಬಹುದು.

ಪ್ರೊಫೆಸರ್ ವಿಜಯ್ ಪದಕಿ ಅವರು ತರಬೇತಿ ಪಡೆದ ಮನಶ್ಶಾಸ್ತ್ರಜ್ಞ ಮತ್ತು ವರ್ತನಾವಾದದ ವಿಜ್ಞಾನಿಯಾಗಿದ್ದಾರೆ ಮತ್ತು ಸಲಹಾ ಕಾರ್ಯಗಳಲ್ಲಿ ಸಂಘಟನೆ ಮತ್ತು ಸಾಂಸ್ಥಿಕ ಅಭಿವೃದ್ಧಿಯ ಕ್ಷೇತ್ರಗಳಲ್ಲಿ ಸಂಶೋಧನೆ ಮತ್ತು ತರಬೇತಿ ಕಾರ್ಯಕ್ರಮಗಳಲ್ಲಿ ಸುದೀರ್ಘ ಅನುಭವವನ್ನು ಹೊಂದಿದ್ದಾರೆ. ಅವರು ಡೇವಿಡ್ ಹಾರ್ಸ್ಬರ್ಗ್ ಮತ್ತು ನೀಲ್ ಬಾಗ್ ಗಳೊಂದಿಗೆ ಅವುಗಳ ಆರಂಭಿಕ ವರ್ಷಗಳಿಂದ ಸಂಪನ್ಮೂಲ ವ್ಯಕ್ತಿಯಾಗಿ ಮತ್ತು ಟ್ರಸ್ಟಿಯಾಗಿ ಸಂಬಂಧ ಹೊಂದಿದ್ದರು. ೧೯೬೦ರಲ್ಲಿ ಬೆಂಗಳೂರು ಲಿಟಲ್ ಥಿಯೇಟರ್ (BLT) ಆರಂಭವಾದ ವರ್ಷದಿಂದ ಅದರ ಭಾಗವಾಗಿ ಪ್ರೊಫೆಸರ್ ಪದಕಿರವರು ಐವತ್ತು ವರ್ಷಗಳಿಂದ ರಂಗಭೂಮಿಯಲ್ಲಿ ಸಕ್ರಿಯರಾಗಿದ್ದಾರೆ. ಅವರು ಪ್ರಸ್ತುತ ಥಿಯೇಟರ್ ಎಜುಕೇಶನ್‌ನ ಧ್ಯೇಯದೊಂದಿಗೆ ಅಕ್ಯಾಡೆಮಿ ಆಫ್ ಥಿಯೇಟರ್ ಆರ್ಟ್ಸ್ ಅನ್ನು ಅಭಿವೃದ್ಧಿಪಡಿಸುವಲ್ಲಿ BLTಗೆ ಸಹಾಯ ಮಾಡುತ್ತಿದ್ದಾರೆ. ಅವರನ್ನು bangalorelittletheatre@gmail.com ಇಲ್ಲಿ ಸಂಪರ್ಕಿಸಬಹುದು.